ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಅಂತಹ ಯೋಜನೆ ಇಲ್ಲ

ಆ) ಮಾಡ್ಯುಲಾರ್ ಎಂಪ್ಲಾಯೆಬಲ್ ಸ್ಕಿಲ್ ಯೋಜನೆಯನ್ನು ರೂಪಿಸಲಾಗುತ್ತಿದೆ.

641 (1009) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :–ವೈದಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ನೆರೆ ರಾಜ್ಯವಾದ ಕೇರಳದಲ್ಲಿ ಉನ್ನತ ಶಿಕ್ಷಣದ ವಿವಿಧ ಕೋರ್ಸುಗಳಲ್ಲಿ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯಕ್ಕಿಂತ ಹೆಚ್ಚು ಸೀಟುಗಳ ಕೋಟಾವನ್ನು ಪಡೆದು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸರ್ಕಾರವು ವೈದ್ಯಕೀಯ, ಇಂಜಿನಿಯರಿಂಗ್, ಬಯೋಟೆಕ್ನಾಲಜಿ, ಬಿ.ಎಸ್ಸಿ., (ನರ್ಸಿಂಗ್) ಮತ್ತು ದಂತ ವೈದ್ಯಕೀಯ ಇತ್ಯಾದಿ ವಿವಿಧ ಕೋರ್ಸುಗಳಲ್ಲಿ ಆಂಗ್ಲೋ ಇಂಡಿಯನ್ಸ್‌ಗೆ ವ್ಯಾಸಂಗ ಮಾಡಲು ಕೋಟಾ ಸೀಟುಗಳನ್ನು ಹೆಚ್ಚಿಸಿ ಏಕೆ ಅವಕಾಶವನ್ನು ನೀಡಬಾರದು ?

ಶ್ರೀ ವಿ. ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :–

ಅ) ಇಲ್ಲ ಉದ್ಭವಿಸುವುದಿಲ್ಲ

642 (283) ಶ್ರೀ ಜಯಪ್ರಕಾಶ್ ಹೆಗ್ಗಡೆ (ಬ್ರಹ್ಮಾವರ) :–ವೈದಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) 2006–07ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಜಾತಿ ಅಲ್ಪಸಂಖ್ಯಾತ ಮತ್ತು ಭಾಷಾ ಅಲ್ಪಸಂಖ್ಯಾತ ಕಾಲೇಜುಗಳಿಗೆ ಸರ್ಕಾರವು ಸೀಟ್ ಮ್ಯಾಟ್ರಿಕ್ಸ್ ನೀಡಲಾಗಿತ್ತು (ಕಾಲೇಜುವಾರು ವಿವರ ನೀಡುವುದು) ?

ಶ್ರೀ ವಿ. ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :–

ವೈದ್ಯಕೀಯ ಕಾಲೇಜುಗಳು

ಅ)	ಧಾರ್ಮಿಕ ಅಲ್ಪಸಂಖ್ಯಾತ	...	3
	ಭಾಷಾ ಅಲ್ಪಸಂಖ್ಯಾತ	...	7
	ದಂತ ವೈದ್ಯಕೀಯ ಕಾಲೇಜುಗಳು		
	ಧಾರ್ಮಿಕ ಅಲ್ಪಸಂಖ್ಯಾತ	...	3
	ಭಾಷಾ ಅಲ್ಪಸಂಖ್ಯಾತ	...	9

ಕಾಲೇಜುವಾರು ವಿವರಗಳು ಕೆಳಕಂಡಂತಿದೆ :

ವೈದ್ಯಕೀಯ

ಧಾರ್ಮಿಕ ಅಲ್ಪಸಂಖ್ಯಾತ

ಕ್ರ ಸಂ.	ಕಾಲೇಜುಗಳು	ಒಟ್ಟು ಸೀಟುಗಳ ಸಂಖ್ಯೆ	ಸರ್ಕಾರಿ ಸೀಟುಗಳ ಸಂಖ್ಯೆ
1.	ಆಲ್-ಅಮೀನ್ ಮೆಡಿಕಲ್ ಕಾಲೇಜ್, ಬಿಜಾಪುರ	100	40
2.	ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜು, ಮಂಗಳೂರು	100	40
3.	ಖಾಜಾ ಬಂದೇನವಾಜ್ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಗುಲ್ಬರ್ಗ	100	40

ಭಾಷಾ ಅಲ್ಪಸಂಖ್ಯಾತ

ಕ್ರ ಸಂ.	ಕಾಲೇಜುಗಳು	ಒಟ್ಟು ಸೀಟುಗಳ ಸಂಖ್ಯೆ	ಸರ್ಕಾರಿ ಸೀಟುಗಳ ಸಂಖ್ಯೆ
1.	ವೈದೇಹಿ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಬೆಂಗಳೂರು	100	40
2.	ಕೆ. ಎಸ್. ಹೆಗ್ಡೆ ಮೆಡಿಕಲ್ ಅಕಾಡೆಮಿ, ಮಂಗಳೂರು	100	40
3.	ನವೋದಯ, ಮೆಡಿಕಲ್ ಕಾಲೇಜ್, ರಾಯಚೂರು	100	40
4.	ಎಸ್.ಡಿ.ಎಂ. ಮೆಡಿಕಲ್ ಕಾಲೇಜ್, ಧಾರವಾಡ	100	40
5.	ಎ.ಜೆ. ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಮಂಗಳೂರು	100	40
6.	ಎಂ.ವಿ.ಜೆ. ಮೆಡಿಕಲ್ ಕಾಲೇಜ್, ಬೆಂಗಳೂರು	100	40
7.	ರಾಜರಾಜೇಶ್ವರಿ ಮೆಡಿಕಲ್ ಕಾಲೇಜ್, ಬೆಂಗಳೂರು	100	40

ದಂತ ವೈದ್ಯಕೀಯ

ಧಾರ್ಮಿಕ ಅಲ್ಪಸಂಖ್ಯಾತ

ಕ್ರ ಸಂ.	ಕಾಲೇಜುಗಳು	ಒಟ್ಟು ಸೀಟುಗಳ ಸಂಖ್ಯೆ	ಸರ್ಕಾರಿ ಸೀಟುಗಳ ಸಂಖ್ಯೆ
1.	ಆಲ್–ಅಮೀನ್ ಡೆಂಟಲ್ ಕಾಲೇಜ್, ಬಿಜಾಪುರ	40	16
2.	ಅಲ್–ಬದಾರ್ ರೂರಲ್ ಡೆಂಟಲ್ ಕಾಲೇಜ್,	40	16
3.	ಫರೂಕೀಯ ಡೆಂಟಲ್ ಕಾಲೇಜ್, ಮೈಸೂರು	40	16

ಭಾಷಾ ಅಲ್ಪಸಂಖ್ಯಾತ

ಕ್ರ ಸಂ.	ಕಾಲೇಜುಗಳು	ಒಟ್ಟು ಸೀಟುಗಳ ಸಂಖ್ಯೆ	ಸರ್ಕಾರಿ ಸೀಟುಗಳ ಸಂಖ್ಯೆ
1.	ಎಂ.ಡಿ.ಎಂ. ಡೆಂಟಲ್ ಕಾಲೇಜ್, ಧಾರವಾಡ	100	40
2.	ಎ.ಬಿ.ಶೆಟ್ಟಿ ಮೆಮೋರಿಯಲ್ ಇನ್ಸ್‌ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್, ಮಂಗಳೂರು	100	40
3.	ಆಕ್ಸ್‌ಫರ್ಡ್ ಡೆಂಟಲ್ ಕಾಲೇಜ್, ಬೆಂಗಳೂರು	100	40
4.	ಮಾರುತಿ ಡೆಂಟಲ್ ಕಾಲೇಜ್, ಬೆಂಗಳೂರು	100	40

1	2	3	4
5.	ಎ.ಜೆ. ಇನ್ಸ್‌ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್, ಮಂಗಳೂರು	100	40
6.	ಕೂರ್ಗ್ ಇನ್ಸ್‌ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್, ವಿರಾಜಪೇಟೆ	40	16
7.	ರಾಜರಾಜೇಶ್ವರಿ ಡೆಂಟಲ್ ಕಾಲೇಜ್, ಬೆಂಗಳೂರು	60	24
8.	ಬೆಂಗಳೂರು ಇನ್ಸ್‌ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್, ಬೆಂಗಳೂರು	60	24
9.	ವೈದೇಹಿ ಇನ್ಸ್‌ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್, ಬೆಂಗಳೂರು	60	24

ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕಿರುವ ನಿಯಮಗಳು

643 (1136) ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :– ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ದಾಖಲಾತಿಗೆ ಅನುಸರಿಸುವ ನಿಯಮಗಳೇನು ;

ಆ) ಪ್ರತಿ ಮೊರಾರ್ಜಿದೇಸಾಯಿ ವಸತಿ ಶಾಲೆಗೆ ಪ್ರತಿವರ್ಷ ಎಷ್ಟು ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಲಾಗುತ್ತಿದೆ ;

ಇ) ಈ ವರ್ಷ ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಎಷ್ಟು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ ; ಅವರುಗಳ ವಿಳಾಸವೇನು ;

ಈ) ಯಾವ ಮಾನದಂಡವನ್ನು ಅನುಸರಿಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ ;

ಉ) ಇವರುಗಳು ಆಯ್ಕೆ ಪರೀಕ್ಷೆಯಲ್ಲಿ ಪಡೆದ ಅಂಕಗಳ ವಿವರವನ್ನು ನೀಡುವುದು?